# BSNL Unions & Associations
# Karnataka Circle,

**Care – BSNLEU Office, CGM Office Premises**
**Halasur, Bengaluru 560 008.**

**ಸುತ್ತೋಲೆ – ೦೧/ ದಿನಾಂಕ 14.06.2017.**

ಆತ್ಮೀಯ ಸಂಗಾತಿಗಳೆ,

ಇಂದು ಸಂಜೆ ಬಿ.ಎಸ್.ಎನ್.ಎಲ್.ಇ.ಯು ಕಛೇರಿಯಲ್ಲಿ ಕರ್ನಾಟಕ ವಲಯದ ಅಧಿಕಾರಿ ಮತ್ತು ಅಧಿಕಾರೇತರ ಸಂಘಟನೆಗಳ ಸಭೆ ನಡೆಯಿತು.

ಕೆಳಗೆ ಕಾಣಿಸಿದ ವಿಷಯಗಳ ಬಗ್ಗೆ, ದಿನಾಂಕ 20.06.2017 ರಂದು ನಡೆಯಬೇಕಿರುವ ಒಂದು ದಿನದ ಧರಣ ಕಾರ್ಯಕ್ರಮದ ಬಗ್ಗೆ ವಿವರವಾದ ಚರ್ಚೆ ನಡೆಯಿತು.

ಬಿ.ಎಸ್.ಎನ್.ಎಲ್. ಸಂಸ್ಥೆಯಲ್ಲಿ ಜನವರಿ 01 2017 ರಿಂದ ಆಗಬೇಕಿರುವ ಮೂರನೇ ವೇತನ ಪರಿಷ್ಕರಣೆ;

ಬಿ.ಎಸ್.ಎನ್.ಎಲ್. ಸಂಸ್ಥೆಯಿಂದ ನಿವೃತ್ತಿ ಹೊಂದಿರುವ ಹಿರಿಯರಿಗೆ ಪಿಂಚಣಿ ಪರಿಷ್ಕರಣೆ; ಬಿ.ಎಸ್.ಎನ್.ಎಲ್. ಸಂಸ್ಥೆಗೆ ನೇರ ನೇಮಕಾತಿ ಹೊಂದಿರುವ ನೌಕರರಿಗೆ ಶೇಕಡ 30 ರ ತನಕ ಪಿಂಚಣಿ ಹೆಚ್ಚಳ;

ಬಿ.ಎಸ್.ಎನ್.ಎಲ್. ಸಂಸ್ಥೆಯ ಆವರಣದಲ್ಲಿ ಪ್ರತಿಭಟನೆ, ಮುಷ್ಕರ ಮಾಡಬಾರದು ಎಂಬ ಕಾರ್ಮಿಕ ವಿರೋಧಿ ಕಾನೂನಿನ ಹಿಂತೆಗೆತ;

ಸಭೆಯಲ್ಲಿ, ಈ ಕೆಳಗೆ ಕಾಣಿಸಿರುವ ಹಲವು ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು:

ಬಿ.ಎಸ್.ಎನ್.ಎಲ್.ಇ.ಯು ಸಂಘಟನೆಯಿಂದ:

ಕಾಂ. ಗುಂಡಣ್ಣ ಸಿ.ಕೆ. ವಲಯ ಕಾರ್ಯದರ್ಶಿ, ಕಾಂ. ಬಾಲಕೃಷ್ಣ ಎಂ.ಸಿ. ವಲಯ ಅಧ್ಯಕ್ಷರು, ಕಾಂ. ಕೇಶವ ಜಿ.ವಿ., ವಲಯ ಖಜಾಂಚಿಗಳು; ಕಾಂ. ಸುದರ್ಶನ್ ಹೆಚ್.ವಿ. ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಹಾಗೂ ಅಖಿಲ ಭಾರತ ಸಂಘಟನಾ ಕಾರ್ಯದರ್ಶಿ, ಕಾಂ.ಇರ್ಫಾನ್ ಪಾಶಾ, ವಲಯ ಸಹಾಯಕ ಕಾರ್ಯದರ್ಶಿ, ಕಾಂ. ಶಿವಲಿಂಗ ಪ್ರಸಾದ್, ವಲಯ ಉಪಾಧ್ಯಕ್ಷರು, ಕಾಂ.ಬಿ.ಆರ್.ಕೃಷ್ಣಮೂರ್ತಿ, ವಲಯ ಸಹಾಯಕ ಕಾರ್ಯದರ್ಶಿ, ಕಾಂ.ಗಿರೀಶ್ ಬುಂಗ್ಲೆ, ಜಿಲ್ಲಾ ಕಾರ್ಯದರ್ಶಿ,ಸಿ.ಜಿ.ಎಮ್ ಕಛೇರಿ, ಕಾಂ.ಫಾರುಖ್, ಜಿಲ್ಲಾ ಕಾರ್ಯದರ್ಶಿ, ಸಿವಿಲ್ ವಿಭಾಗ;

ಎಸ್.ಎನ್.ಇ.ಎ (ಇ) ಸಂಘಟನೆಯಿಂದ:

ಕಾಂ.ಹುಲಿರಾಜ್, ಬೆಂಗಳೂರು ಜಿಲ್ಲಾ ಅಧ್ಯಕರು; ಕಾಂ.ಸದಾನಂದ ಮಕ್ಕಣ್ಣನವರ್, ಜಿಲ್ಲಾ ಕಾರ್ಯದರ್ಶಿ, ಸಿ.ಜಿ.ಎಮ್ ಕಛೇರಿ;

ಎ.ಐ.ಜಿ.ಇ.ಟಿ.ಒ.ಎ ಸಂಘಟನೆಯಿಂದ:

ಕಾಂ.ಅಶೋಕ್ ಶಿಗ್ಲಿ, ವಲಯ ಅಧ್ಯಕ್ಷರು, ಕಾಂ.ಚಂದ್ರನ್ ಡಿ.ಟಿ., ಅಖಿಲ ಭಾರತ ಸಹಾಯಕ ಕಾರ್ಯದರ್ಶಿಗಳು.;

ಎಸ್.ಎನ್.ಎ.ಟಿ.ಟಿ.ಎ ಸಂಘಟನೆಯಿಂದ:

ಕಾಂ.ಕಿರಣ್ ಕುಮಾರ್, ವಲಯ ಅಧ್ಯಕ್ಷರು, ಕಾಂ.ಅರುಣ್ ಕುಮಾರ್, ಬೆಂಗಳೂರು ಜಿಲ್ಲಾ ಅಧ್ಯಕ್ಷರು, ಕಾಂ.ಆರ್.ಅಶ್ವಿನ್., ಬೆಂಗಳೂರು ಜಿಲ್ಲಾ ಕಾರ್ಯದರ್ಶಿಗಳು;

ಎನ್.ಯು.ಬಿ.ಎಸ್.ಎನ್.ಎಲ್. ಡಬ್ಲ್ಯೂ–ಎಫ್.ಎನ್.ಟಿ.ಒ ಸಂಘಟನೆಯಿಂದ

ಕಾಂ.ಮಹಾಲಿಂಗಯ್ಯ , ವಲಯ ಕಾರ್ಯದರ್ಶಿ, ಕಾಂ.ಪಟ್ಟಯ್ಯ, ಅಖಿಲ ಭಾರತ ಸಹಾಯಕ ಕಾರ್ಯದರ್ಶಿ.;

ಬೇಸ್ (ಇ) ಸಂಘಟನೆಯಿಂದ:ಕಾಂ.ಮುರಳಿಮೋಹನ್, ಜಿಲ್ಲಾ ಕಾರ್ಯದರ್ಶಿ, ಸಿ.ಜಿ.ಎಮ್ ಕಛೇರಿ;

ಎ.ಐ.ಬಿ.ಡಿ.ಪಿ.ಎ ಸಂಘಟನೆಯಿಂದ: ಕಾಂ.ಮುದ್ದಯ್ಯ, ವಲಯ ಕಾರ್ಯದರ್ಶಿಗಳು.

ಸಭೆಯ ಅಧ್ಯಕ್ಷತೆಯನ್ನು ಎಸ್.ಎನ್.ಇ.ಎ (ಇ) ಸಂಘಟನೆಯ ಕಾಂ. ಕಾಂ.ಹುಲಿರಾಜ್, ಬೆಂಗಳೂರು ಜಿಲ್ಲಾ ಅಧ್ಯಕರು, ಅವರು ವಹಿಸಿದ್ದರು.

ಸಭೆಯ ಪ್ರಾರಂಭಕ್ಕೆ, ಸಂಚಾಲಕರಾದ, ಕಾಂ.ಗುಂಡಣ್ಣ ಅವರು ಎಲ್ಲರನ್ನೂ ಸ್ವಾಗತಿಸಿ, ಇದುವರೆವಿಗೂ ಬಿ.ಎಸ್.ಎನ್.ಎಲ್. ನ ಆಡಳಿತ ಮಂಡಳಿಯು ವೇತನ ಪರಿಷ್ಕರಣೆ ವಿಷಯದಲ್ಲಿ ತೆಗೆದುಕೊಂಡ ಹತ್ತು ಹಲವು ರೀತಿಯ ನಿಲುವುಗಳನ್ನೂ, ಡಿಓಟಿ ವೇತನ ಪರಿಷ್ಕರಣೆಯ ಬಗ್ಗೆ ನಕಾರಾತ್ಮಕವಾಗಿ ತೆಗೆದುಕೊಳ್ಳುತ್ತಿರುವ ನಿಲುವುಗಳನ್ನೂ, ಕೇಂದ್ರ ಸರ್ಕಾರ ಇದುವರೆವಿಗೂ ಬಿ.ಎಸ್.ಎನ್.ಎಲ್. ಸಂಸ್ಥೆಯಲ್ಲಿ ವೇತನ ಪರಿಷ್ಕರಣೆಗೆ ಪರವಾನಗಿಯನ್ನು ಕೊಡದೇ ಇರುವುದು; ಲಾಭ–ನಷ್ಟದ ಆಧಾರದಲ್ಲಿ ವೇತನ ಪರಿಷ್ಕರಣೆ ಮಾಡಲಾಗುವುದು ಎಂಬ ಸಂಸ್ಥೆ–ಕಾರ್ಮಿಕ ವಿರೋಧಿ ಗೈರ್ ಕಾನೂನ್ ನಿಲುವುಗಳನ್ನು ಪ್ರಚಾರ ಮಾಡುತ್ತಿರುವುದು; ಮುಂತಾದ ಹಲವಾರು ವಿವರಗಳನ್ನು ನೀಡಿದರು;

ದಿನಾಂಕ 02.06.2017 ರಂದು, ನವದೆಹಲಿಯಲ್ಲಿ ನಡೆದ ಬಿ.ಎಸ್.ಎನ್.ಎಲ್. ಯೂನಿಯನ್ಸ್ ಮತ್ತು ಅಸ್ಸೋಸಿಯೇಶನ್ಸ್ ನ ಮಹಾ ಸಭೆಯ ವಿವರಗಳನ್ನು ನೀಡಿದರು; ಸಭೆಯಲ್ಲಿ ಭಾಗವಹಿಸಿದ ಎಲ್ಲ ಸಂಘಟನೆಗಳೂ ಸಹ ವೇತನ ಪರಿಷ್ಕರಣೆಗಾಗಿ ಮುಂದಿನ ದಿನಗಳಲ್ಲಿ ಸೂಚಿಸಿರುವ ಹೋರಾಟದ ಕಾರ್ಯಕ್ರಮಗಳನ್ನು ಅನುಮೋದಿಸಿದ ವಿವರಗಳನ್ನೂ ನೀಡಿದರು;

ಅದೇ ರೀತಿ, ನಮ್ಮ ವಲಯದಲ್ಲೂ ಸಹ ಐಕ್ಯ ಹೋರಾಟಕ್ಕೆ ಸಹಕಾರಿಯಾಗುವಂತಹ ನಿಲುವುಗಳನ್ನು ನಾವು ತೆಗೆದುಕೊಳ್ಳಬೇಕಿರುವ ಅತ್ಯಂತ ತುರ್ತಿನ ಅವಶ್ಯಕತೆಯನ್ನು ವಿವರಿಸಿದರು; ಈ ಎಲ್ಲ ಐಕ್ಯ ಹೋರಾಟಗಳಿಂದ ಹೊರಗಿರುವ ಕೆಲವು ಪ್ರಮುಖ ಸಂಘಟನೆಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಐಕ್ಯ ಹೋರಾಟವನ್ನು ಮಾಡಬೇಕಿರುವ ಪರಿಸ್ಥಿತಿಯನ್ನು ವಿವರಿಸಿದರು;

ನಂತರ ಎಲ್ಲ ಸಂಘಟನೆಗಳಿಂದ, ಆಯಾ ಸಂಘಟನೆಗಳ ಪ್ರಮುಖ ಸಂಗಾತಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡಿ, ತಮ್ಮ ಸಂಘಟನೆಯ ಸಂಪೂರ್ಣ ಸಹಮತ, ಸಹಕಾರ, ಮುಂದಿನ ದಿನಗಳ ಹೋರಾಟಗಳಿಗೆ ಇರುವುದಾಗಿ ಘೋಶಿಸಿದರು; ಈ ಸಭೆಯ ಮಹತ್ವವನ್ನೂ, ಮಾಡು ಇಲ್ಲವೇ ಮಡಿ ಎಂಬ ರೀತಿಯ ಹೋರಾಟಕ್ಕೆ ಸಜ್ಜುಗೊಳ್ಳಬೇಕಿರುವ ವಿವರಗಳನ್ನು ತಮ್ಮ ಸಂಘಟನೆಗಳ ಜಿಲ್ಲಾ ಕಾರ್ಯದರ್ಶಿಗಳಿಗೆ ಪ್ರಸಾರ ಮಾಡುವುದಾಗಿ ಭರವಸೆಯನ್ನು ನೀಡಿದರು;

ದಿನಾಂಕ 20.06.2017 ರ ಒಂದು ದಿನದ ಧರಣ ಕಾರ್ಯಕ್ರಮ

ದಿನಾಂಕ 13.07.2017 ರ ಒಂದು ದಿನದ ಉಪವಾಸ ಮುಷ್ಕರ ಮತ್ತು

ದಿನಾಂಕ 27.07.2017 ರ ಒಂದು ದಿನದ ಸಂಪೂರ್ಣ ಮುಷ್ಕರಕ್ಕೆ

ತಮ್ಮ ಸಂಘಟನೆಗಳ ಬೆಂಬಲ ಇರುವುದಾಗಿಯೂ, ವಲಯ ಮಟ್ಟದಲ್ಲಿ ಎಲ್ಲ ಕಾರ್ಯಕ್ರಮಗಳನ್ನೂ ಯಶಸ್ವಿಯಾಗಿ ಫಲಪ್ರದಗೊಳಿಸಲು ಕಾರ್ಯೋನ್ಮುಖರಾಗುವುದಾಗಿಯೂ ತಿಳಿಸಿದರು;

ಎ.ಐ.ಬಿ.ಡಿ.ಪಿ.ಎ ಸಂಘಟನೆಯ ವಲಯ ಕಾರ್ಯದರ್ಶಿಗಳೂ ಸಭೆಯಲ್ಲಿ ಮಾತನಾಡಿ, ತಮ್ಮ ಸಂಘಟನೆಯ ನಿವೃತ್ತ ಹಿರಿಯ ನೌಕರರು ಎಲ್ಲ ಹೋರಾಟಗಳಲ್ಲೂ ಸಂಪೂರ್ಣವಾಗಿ ಭಾಗವಹಿಸುತ್ತಾರೆ ಎಂಬ ಭರವಸೆಯ ಮಾತುಗಳನ್ನು ಆಡಿದರು.

ಕಾಂ.ಶಿವಲಿಂಗ ಪ್ರಸಾದ್ ಅವರು, ಸಭೆಯಲ್ಲಿ ಮಾತನಾಡಿದ ಎಲ್ಲ ಸಂಘಟನೆಗಳ ನಾಯಕರ ಮಾತುಗಳ ಸಾರವನ್ನು ಮತ್ತೊಮ್ಮೆ ಸಭೆಯ ಗಮನಕ್ಕೆ ತಂದು, ವಂದನಾರ್ಪಣೆಯನ್ನು ಮಾಡಿದರು;

## ವಲಯ ಕಾರ್ಯದರ್ಶಿಗಳು ಮತ್ತು ಜಿಲ್ಲಾ ಕಾರ್ಯದರ್ಶಿಗಳ ಖುದ್ದು ಗಮನಕ್ಕೆ:

ಈ ಸುತ್ತೋಲೆಯ ಮಾಹಿತಿಯನ್ನು ತಮ್ಮ ಸಂಘಟನೆಯ ಎಲ್ಲ ಹಂತದ ಪದಾಧಿಕಾರಿಗಳ,ಶಾಖಾ ಕಾರ್ಯದರ್ಶಿಗಳ, ಸಾಮಾನ್ಯ ಸದಸ್ಯರುಗಳ ಗಮನಕ್ಕೆ ಈ ಕೂಡಲೇ ತರಬೇಕಾಗಿ ವಿನಂತಿ, ತಮ್ಮ ಸಂಘಟನೆಗಳ ಪ್ರಧಾನ ಕಾರ್ಯದರ್ಶಿಗಳ ಸುತ್ತೋಲೆಯನ್ನೂ, ಆದೇಶಗಳನ್ನೂ ಸಹ ಈ ಸುತ್ತೋಲೆಯೊಟ್ಟಿಗೆ ಪ್ರಸಾರ ಮಾಡಬೇಕೆಂದು ವಿನಂತಿ.

ದಿನಾಂಕ 20.06.2017 ರ ಒಂದು ದಿನದ ಧರಣಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲ ಸಂಘಟನೆಗಳ ಕಾರ್ಯಕರ್ತರು, ಪದಾಧಿಕಾರಿಗಳು ಖಡ್ಡಾಯವಾಗಿ ಒಂದು ದಿನದ ರಜೆಯನ್ನು ಹಾಕಿ ಭಾಗವಹಿಸಬೇಕು;

ಧರಣಿ ಕಾರ್ಯಕ್ರಮದ ಸ್ಥಳದಲ್ಲಿ ವಿಶೇಷ ಹಾಜರಾತಿ ಪುಸ್ತಕದಲ್ಲಿ ಭಾಗವಹಿಸಿದ ಸಂಗಾತಿಗಳ ಸಹಿ ಸಂಗ್ರಹಣೆಯನ್ನು ಮಾಡಬೇಕು; ಎಲ್ಲ ರೀತಿಯಲ್ಲೂ ಜಿಲ್ಲಾ ಮಟ್ಟದ ಧರಣಿ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ನಡೆಯುವ ಹಾಗೆ ನೋಡಿಕೊಳ್ಳುವುದು, ಆಯಾ ಸಂಘಟನೆಗಳ ವಲಯ ಹಾಗೂ ಜಿಲ್ಲಾ ಕಾರ್ಯದರ್ಶಿಗಳ ಜವಾಬ್ದಾರಿಯಾಗಿರುತ್ತದೆ; ಈ ವಿಷಯದಲ್ಲಿ, ಐಕ್ಯ ಹೋರಾಟದಲ್ಲಿ, ಒಡಕು ಮೂಡದಿರುವ ಹಾಗೆ ನೋಡಿಕೊಳ್ಳುವುದು ನಮ್ಮೆಲ್ಲರ ಗುರುತರ ಕರ್ತ್ಯವ್ಯವಾಗಿರುತ್ತದೆ

ಬೆಂಗಳೂರಿನಲ್ಲಿ, ಪಿಜಿಎಮ್ ಕಛೇರಿ, W M S Compound ಕಛೇರಿಯ ಎಲ್ಲ ಕಾರ್ಯಕರ್ತರೂ, ಸಿ.ಜಿ.ಎಮ್ ಕಛೇರಿಯ ಆವರಣದಲ್ಲಿ ನಡೆಯುವ ಕೇಂದ್ರೀಕೃತ ಧರಣಿ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು; ಖಡ್ಡಾಯವಾಗಿ ರಜೆ ಹಾಕಿ, ಧರಣಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಹಾಗೆ ನೋಡಿಕೊಳ್ಳುವ ಜವಾಬ್ದಾರಿ, ಆಯಾ ಸಂಘಟನೆಗಳ ವಲಯ ಹಾಗೂ ಜಿಲ್ಲಾ ಕಾರ್ಯದರ್ಶಿಗಳ ಜವಾಬ್ಧಾರಿಯಾಗಿರುತ್ತದೆ;

ಈ ವಿಷಯದಲ್ಲಿ, ಐಕ್ಯ ಹೋರಾಟದಲ್ಲಿ, ಒಡಕು ಮೂಡದಿರುವ ಹಾಗೆ ನೋಡಿಕೊಳ್ಳುವುದು ನಮ್ಮೆಲ್ಲರ ಗುರುತರ ಕರ್ತ್ಯವ್ಯವಾಗಿರುತ್ತದೆ;

ಕ್ರಾಂತಿಕಾರಿ ಶುಭಾಷಯಗಳೊಂದಿಗೆ,



(ಗುಂಡಣ್ಣ ಸಿ.ಕೆ)
ಸಂಚಾಲಕ.